**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 597/2024 **RW** -1

**ದಿಃ 16.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಎಸ ಎನ ಕೆ ರವರಿಂದ.**

ಅಪಘಾತವಾದ ದಿಃ30-01-2024 ಇತ್ತು ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಕಂಪನಿ ವತಿಯಿಂದ ನೀವು ಯಾವುದೇ inspection ಮಾಡಿಲ್ಲವೆಂದರೆ ಸಾಕ್ಷಿ ಮಾಡಿರುತ್ತೇವೆ ಎನ್ನುತ್ತಾರೆ. ಆದರೆ ಅದು internal inspection ಎನ್ನುತ್ತಾರೆ. ಅರ್ಜಿದಾರ ಅಪಘಾತದ ಸಮಯದಲ್ಲಿ ಅಜಾಗರೂಕತೆಯಿಂದ ಗಾಡಿ ಚಾಲನೆ ಮಾಡುತ್ತಿದ್ದಾ ಎಂದು ಹೇಳಲು ಪೋಲೀಸ ದಾಖಲೆಗಳನ್ನು ಬಿಟ್ಟು ನಮ್ಮ ಬಳಿ ಯಾವುದೇ ದಾಖಲೆ ಇಲ್ಲವೆಂದರೆ ಸರಿ. ಅಪಘಾತವಾದ ಸಮಯದಲ್ಲಿ ನಮ್ಮ ಕಂಪನಿಯ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ವಿಮಾ ತುಂಬುವವರಿಗೆ ಅಪಘಾತವಾಗಿ ತೀವ್ರ ಸ್ವರೂಪದ ಗಾಯವಾದರೆ ನಾವು ಅವರಿಗೆ ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸಾಕ್ಷಿ terms and conditions ಗೆ ಒಳಪಟ್ಟು ಎನ್ನುತ್ತಾರೆ. ಸದರಿ ಪಾಲಿಸಿಯ ಮೇಲೆ ಬೇರೆಯವರು ಯಾರು ಕ್ಲೇಮ ಮಾಡಿಲ್ಲವೆಂದರೆ ಸಾಕ್ಷಿ ಯಾರು ಮಾಡಿಲ್ಲ ಎನ್ನುತ್ತಾರೆ. ನನಗೆ ಸದರಿ ಕೇಸನ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲವೆಂದರೆ ಸಾಕ್ಷಿ ಪಾಲಿಸಿಯ ಬಗ್ಗೆ ಗೊತ್ತಿದೆ ಎನ್ನುತ್ತಾರೆ. ನಮ್ಮ ಕಂಪನಿಯಿಂದ ಯಾವುದೇ ಪರಿಹಾರದ ಹಣ ಕೊಡಬಾರದು ಎಂಬ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ